ಅ) ಎಮ್ಮಿಗನೂರು ಹಾಗೂ ಸುತ್ತಮುತ್ತಲಿನ ಪ್ರದೇಶದ ವಿದ್ಯಾರ್ಥಿಗಳು ಪದವಿಪೂರ್ವ ಕಾಲೇಜಿಲ್ಲದ ಕಾರಣ ತಮ್ಮ ವ್ಯಾಸಂಗ ವನ್ನು ನಿಲ್ಲಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) 1999-2000ನೇ ಸಾಲಿನಲ್ಲಿ ಎಮ್ಮಿಗನೂರಿನಲ್ಲಿ ಪದವಿ ಪೂರ್ವ ಕಾಲೇಜನ್ನು ಮಂಜೂರು ಮಾಡುವ ಉದ್ದೇಶ ಸರ್ಕಾರಕ್ಕಿದೆಯೇ ?

ಶ್ರೀ ಹೆಚ್. ಜಿ. ಗೋವಿಂದ ಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) ಎಮ್ಮಿಗನೂರಿನ ಹತ್ತಿರದ ಈ ಕೆಳಕಂಡ ಕಾಲೇಜುಗಳು ಕಾರ್ಯನಿರ್ವಹಿಸುತ್ತಿರುತ್ತದೆ.

	ಕಾಲೇಜಿನ ಹೆಸರು	ವಿದ್ಯಾರ್ಥಿಗಳ ಸಂಖ್ಯೆ	
		ಪ್ರಥಮ ಪಿಯುಸಿ	ದ್ವಿತೀಯ ಪಿಯುಸಿ
1)	ಸರ್ಕಾರಿ ಪದವಿಪೂರ್ವ ಕಾಲೇಜು ಕುರುಗೋಡು 22. ಕಿ. ಮೀ	48	31
2)	ಸರ್ಕಾರಿ ಬಾಲಕರ ಪದವಿ ಪೂರ್ವ ಕಾಲೇಜು, ಕಂಪ್ಲಿ 18 ಕಿ. ಮಿ.	40	89
3)	ಸರ್ಕಾರಿ ಬಾಲಕಿಯರ ಪದವಿಪೂರ್ವ ಕಾಲೇಜು ಕಂಪ್ಲಿ 18 ಕಿ. ಮಿ.		48 68

ಈ ಕಾಲೇಜುಗಳಲ್ಲಿ ಇನ್ನೂ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳಲು ಅವಕಾಶವಿದೆ. ಆದ್ದರಿಂದ, ಕಾಲೇಜಿಲ್ಲವೆಂದು ವ್ಯಾಸಂಗ ನಿಲ್ಲಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ಮೇಲ್ಕಾಣಿಸಿದ ಮೂರೂ ಕಾಲೇಜುಗಳಲ್ಲಿ ದಾಖಲಾತಿಗೆ ಇನ್ನೂ ಅವಕಾಶವಿರುವುದರಿಂದ, 1999-2000ನೇ ಸಾಲಿನಲ್ಲಿ ಎಮ್ಮಿಗನೂರಿನಲ್ಲಿ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

ವಿಜಾಪುರ ಜಿಲ್ಲೆಯಲ್ಲಿ ಡಿ. ಪಿ. ಇ. ಪಿ. ಕಾರ್ಯಕ್ರಮ

357 (484) ಶ್ರೀ ಬಸನಗೌಡ ರಾಮನಗೌಡ ಪಾಟೀಲ (ಯತ್ನಾಳ) (ಬಿಜಾಪುರ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ವಿಜಾಪುರ ಜಿಲ್ಲೆಯಲ್ಲಿ ಡಿ. ಪಿ. ಇ. ಪಿ. ಕಾರ್ಯಕ್ರಮದ ಕೈಗೊಳ್ಳುತ್ತಿರುವ ಕಾರ್ಯಕ್ರಮಗಳಾವುವು

ಆ) ಈ ಕಾರ್ಯಕ್ರಮಗಳಿಗೆ ಡಿ.ಪಿ.ಇ.ಪಿ. ಕಾರ್ಯಕ್ರಮದಡಿ ಒದಗಿಸಲಾದ ಹಣಎಷ್ಟು ? ಖರ್ಚು ಮಾಡಲಾದ ಹಣ ಎಷ್ಟು ?

ಅ) (1)ಶಾಲಾ ರಹಿತ ವಸತಿ ಪ್ರದೇಶದಲ್ಲಿ 100 ಹೊಸ ಶಾಲೆಗಳನ್ನು ಪ್ರಾರಂಭಿಸಲಾಗಿದೆ. ಪ್ರತಿ ಶಾಲೆಗೂ ಇಬ್ಬರು ಶಿಕ್ಷಕರಂತೆ ನೇಮಿಸಲಾಗಿದೆ.

ಇ) ಈ ಕಾರ್ಯಕ್ರಮದಡಿ ನಿಗಧಿಪಡಿಸಿರುವ ಗುರಿಯ ಸಾಧನೆ ಆಗಿದೆಯೇ

ಈ) ಆಗಿಲ್ಲವೆಂದರೆ, ಅದಕ್ಕೆ ಕಾರಣಗಳೇನು?

ಶ್ರೀ ಹೆಚ್.ಜಿ.ಗೋವಿಂದಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

1) ಶಾಲಾ ರಹಿತ ವಸತಿ ಪ್ರದೆಸಿಶದಲ್ಲಿ 100 ಹೊಸ ಶಾಲೆಗಳನ್ನು ಪ್ರಾರಂಭಿಸಲಾಗಿದೆ. ಪ್ರತಿ ಶಾಲೆಗೂ ಇಬ್ಬರು ಶಿಕ್ಷಕರಂತೆ ನೇಮಿಸಲಾಗಿದೆ.

(2) 158 ಕಿರಿಯ ಪ್ರಾಥಮಿಕ ಶಾಲೆಗಳನ್ನು ಐದನೇ ವರ್ಗಕ್ಕೆ ಉನ್ನತೀಕರಿಸಲಾಗಿದೆ.

(3) 1997-98ನೇ ಸಾಲಿನಲ್ಲಿ ಹೊಸ ಶಾಲಾ ಕಟ್ಟಡಗಳು 35, ಬಿಆರ್‌ಸಿ ಕಟ್ಟಡಗಳು 4 ಕಾಮಗಾರಿಗಳು ವಿವಿಧ ಹಂತದಲ್ಲಿದೆ.

(4) 1998-99ನೇ ಸಾಲಿನಲ್ಲಿ ಹೊಸ ಶಾಲಾ ಕಟ್ಟಡಗಳು 65, ಸಿಆರ್‌ಸಿ ಕಟ್ಟಡಗಳು, ಬಿಆರ್‌ಸಿ ಕಟ್ಟಡಗಳು 8 ಕಾಮಗಾರಿಗಳು ವಿವಿಧ ಹಂತಗಳಲ್ಲಿವೆ.

(5) 124 ಕಲಾ ಜಾಥಗಳನ್ನು, 46 ಚಿಣ್ಣರ ಮೇಳಗಳನ್ನು ಹಾಗೂ 11 ವಿ.ಇ.ಸಿ. ಮೇಳಗಳನ್ನು ನಡೆಸಲಾಗಿದೆ.

(6) 5200 ಶಿಕ್ಷಕರಿಗೆ, 510 ಮುಖ್ಯ ಶಿಕ್ಷಕರಿಗೆ ತರಬೇತಿನೀಡಲಾಗಿದೆ ಹಾಗೂ 49 ಶಿಕ್ಷಕರಿಗೆ ಐಇಡಿ ತರಬೇತಿ, 116 ಶಿಕ್ಷಕರಿಗೆ ಜಂಡರ್ ತರಬೇತಿ ಹಾಗೂ 1-4ನೇ ತರಗತಿ ವಿದ್ಯಾರ್ಥಿಗಳಿಗೆ ಚಟುವಟಿಕೆ ಆಧಾರಿತ ಅಭ್ಯಾಸ ಪುಸ್ತಕಗಳನ್ನು ಹಂಚಲಾಗಿದೆ. ಅಲ್ಲದೆ, 100 ಹಳ್ಳಿಗಳಲ್ಲಿ ಸೂಕ್ಷ್ಮ ಯೋಜನಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. 4730 ವಿಇಸಿ ಸದಸ್ಯರಿಗೆ ತರಬೇತಿ ನೀಡಲಾಗಿದೆ. ಹಾಗೂ 57 ಆಡಳಿತಾಧಿಕಾರಿಗಳಿಗೆ ತರಬೇತಿ ನೀಡಲಾಗಿದೆ.

ಆ) ಬಿಜಾಪುರ ಜಿಲ್ಲೆಯ ಒಟ್ಟಾರೆ ಐದು ವರ್ಷಗಳಯೋಜನಾ ವೆಚ್ಚ ರೂ. 3666.25 ಲಕ್ಷಗಳು. ಬಿಡುಗಡೆಯಾದ ಮತ್ತು ಖರ್ಚಾದ ಹಣದ ವಿವರ :

1997-98			1998-99		
ನಿಗದಿಪಡಿಸಿದ ಮೊತ್ತ	ಖರ್ಚಾದ ಮೊತ್ತ	ಶೇಕಡವಾರು ಪ್ರಗತಿ	ನಿಗದಿ ಪಡಿಸಿದ ಮೊತ್ತ	ಖರ್ಚಾದ ಪ್ರಗತಿ	ಶೇಕಡವಾರು ಪ್ರಗತಿ
473.82	275.92	58.23	1169.55	641.14	54.81

ಇ) ಬಿಜಾಪುರ ಜಿಲ್ಲೆಯಲ್ಲಿ ಡಿ.ಪಿ..ಪಿ. ಕಾರ್ಯಕ್ರಮ ಅಕ್ಟೋಬರ್ 97ರಲ್ಲಿ ಪ್ರಾರಂಭವಾಗಿದ್ದು 1997-98ನೇ ಸಾಲಿನಲ್ಲಿ 58.23 ಶೇಕಡ ಗುರಿ ಸಾಧಿಸಲಾಗಿದೆ. 1998-99ನೇ ಸಾಲಿನಲ್ಲಿ ಫೆಬ್ರವರಿ 99ರ ಅಂತ್ಯದವರಿಗೆ 54.81 ಶೇಕಡ ಗುರಿ ಸಾಧನೆಯಾಗಿದ್ದು ಮಾರ್ಚಿ 99ರ ಒಳಗೆ ಇನ್ನೂ ಹೆಚ್ಚಿನ ಪ್ರಗತಿಯನ್ನು ನಿರೀಕ್ಷಿಸಲಾಗಿದೆ.

ಈ) ಸಿವಿಲ್ ಕಾಮಗಾರಿಗಳ ನಿರ್ಮಾಣವು ವಿವಿದ ಹಂತಗಳಲ್ಲಿವೆ. ವಿವಿಧ ಹಂತದ ನಿರ್ಮಾಣದ ಪರಿಶೀಲನೆಗೊಳಪಟ್ಟು ಕಾಮಗಾರಿಯ ಕೆಲಸಕ್ಕೆ ಕಂತಿನ ರೂಪದಲ್ಲಿ ಹಣ ಪಾವತಿಸಲಾಗುತ್ತಿದೆ. ಅತಿ ಶೀಘ್ರದಲ್ಲಿಯೇ ಹೆಚ್ಚಿನ ಕಟ್ಟಡಗಳ ನಿರ್ಮಾಣ ಪೂರ್ಣಗೊಳ್ಳುವ ನಿರೀಕ್ಷೆಯಿದೆ.

ಬೈಂದೂರು ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕುಟುಂಬ ಕಲ್ಯಾಣ ಶಸ್ತ್ರ ಚಿಕಿತ್ಸೆ

361 (828) ಶ್ರೀ ಕೆ.ಗೋಪಾಲ ಪೂಜಾರಿ (ಬೈಂದೂರು) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೈಂದೂರು ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕೆಲವು ತಿಂಗಳಿನಿಂದೀಚೆಗೆ ಕುಟುಂಬ ಕಲ್ಯಾಣ ಶಸ್ತ್ರ ಚಿಕಿತ್ಸೆ ನಡೆಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಸಾರ್ವಜನಿಕ ಹಿತದೃಷ್ಟಿಯಿಂದ ಇಲ್ಲಿ ಶಸ್ತ್ರ ಚಿಕಿತ್ಸೆ ನಡೆಸಲು ಸೂಕ್ತ ಕ್ರಮವನ್ನು ಸರ್ಕಾರವು ತೆಗೆದುಕೊಳ್ಳಲಿದೆಯೇ ?

ಡಾ॥ ಹೆಚ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಹೌದು.

ಆ) ಹೌದು, ಸಂತಾನಹರಣ ಶಸ್ತ್ರ ಚಿಕಿತ್ಸಾ ಶಿಬಿರಗಳನ್ನು ನಡೆಸಲಾಗುವುದು.

ಬೈಂದೂರಿಗೆ ಪ್ರತ್ಯೇಕ ವಲಯ ಶಿಕ್ಷಣಾಧಿಕಾರಿಗಳ ಕಛೇರಿ

362 (829) ಶ್ರೀ ಕೆ.ಗೋಪಾಲ ಪೂಜಾರಿ (ಬೈಂದೂರು) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕುಂದಾಪುರ ವಲಯ ಶಿಕ್ಷಣಾಧಿಕಾರಿಗಳ ಕಛೇರಿ ವ್ಯಾಪ್ತಿಗೊಳಪಟ್ಟು ಕಛೇರಿ ಕೆಲಸಗಳ ಒತ್ತಡ ತುಂಬಾ ಇರುವುದರಿಂದ ಬೈಂದೂರಿಗೆ ಪ್ರತ್ಯೇಕ ವಲಯ ಶಿಕ್ಷಣಾಧಿಕಾರಿಗಳ ಕಛೇರಿ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ)ಇದಕ್ಕಿಂತಲೂ ಕಡಿಮೆ ಒತ್ತಡವಿದ್ದ ಉಡುಪಿ ವಲಯವನ್ನು ಹಿಂದೆ ಉಡುಪಿ ಬ್ರಹ್ಮಾವರ ವಲಯಗಳಾಗಿ ವಿಭಜನೆ ಮಾಡಿರುವುದು ನಿಜವೆ : ಹಾಗಿದ್ದಲ್ಲಿ ಅದರಂತೆ ಬೈಂದೂರಿನಲ್ಲಿ ಪ್ರತ್ಯೇಕ ವಲಯ ಶಿಕ್ಷಣಾಧಿಕಾರಿಗಳ ಕಛೇರಿಯನ್ನು ತೆರೆಯಲಾಗುವುದೇ ?

ಶ್ರೀ ಹೆಚ್.ಜಿ.ಗೋವಿಂದ ಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ)ಹೌದು. ಬಂದಿದೆ.